ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ಐ.ಪಿ.ಪಿ. ಮತ್ತು ಕೆ.ಎಫ್.ಟಿ. ಒಳರೋಗಿಗಳಿಗೆ ಆಹಾರ ಸರಬರಾಜು, ಔಷಧಿ ಮತ್ತು ಸಿಬ್ಬಂದಿ ವರ್ಗಕ್ಕೋಸ್ಕರ ಪ್ರತ್ಯೇಕವಾದ ಹಣವನ್ನು ತೆಗೆದಿಟ್ಟಿಲ್ಲ. ಕಳೆದ ವರ್ಷ ಕೆ.ಎಫ್.ಟಿ. ವಾರ್ಡ್ ಪ್ರಾರಂಭವಾಯಿತು. ಇದಕ್ಕೆ ಅಲಾಟ್‌ಮೆಂಟ್ ಇಲ್ಲ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಐ.ಪಿ.ಪಿ.ಗೆ ಸಂಬಂಧಪಟ್ಟಂತೆ ಅಲಾಟ್‌ಮೆಂಟ್ ಇದೆ. ಕೆ.ಎಫ್.ಟಿ.ಗೆ ಅಲಾಟ್‌ಮೆಂಟ್ ಇಲ್ಲ. ಇದನ್ನು ಆದಷ್ಟು ಬೇಗ ಮಾಡಿಸುತ್ತೇನೆ.

ಅಧ್ಯಕ್ಷರು.—ಅಲಾಟ್‌ಮೆಂಟ್ ಇದೆಯೆಂದು ಸಚಿವರು ಹೇಳಿದ್ದಾರೆ. ಈಗ ನೀವು ಕೇಳಿದರೆ ಅಲಾಟ್‌ಮೆಂಟ್ ಇಲ್ಲ ಎಂದು ಹೇಳಿಬಿಟ್ಟಾರು, ಸುಮ್ಮನಿರಿ.

ವಿಷಯ: ಕೂಡ್ಲಿಗಿಯಲ್ಲಿ ಹೆರಿಗೆ ಆಸ್ಪತ್ರೆಯ ನಿರ್ಮಾಣ.

ಪ್ರ. 253 (67) ಶ್ರೀ ಕೆ. ಚೆನ್ನಬಸವನಗೌಡ (ಕೂಡ್ಲಿಗಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಪಟ್ಟಣದ ಜನರು 10 ಹಾಸಿಗೆಗಳ ಹೆರಿಗೆ ಆಸ್ಪತ್ರೆಗಾಗಿ 42,000·00 ರೂ.ಗಳನ್ನು ಮತ್ತು 3 ಎಕರೆ ಜಮೀನನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

(ಆ) ಕಾರ್ಯರೂಪಕ್ಕೆ ತರಲು ವಿಳಂಬವಾಗಲು ಕಾರಣವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

(ಅ) ಸರ್ಕಾರವು 3 ಎಕರೆ ಜಮೀನಿನ ದಾನವನ್ನು ಮತ್ತು 35,000·00 ರೂ.ಗಳ ನಗದು ಹಣದ ವಂತಿಗೆಯನ್ನು ಪಡೆದಿದೆ.

(ಆ) ಸ್ಥಳೀಯ ಜನರಿಂದ ಇನ್ನೂ 15,000·00 ರೂ. ನಗದು ಹಣದ ವಂತಿಗೆ ಬರಬೇಕಾಗಿದೆ. ಆಲ್ಲದೆ ಸದ್ಯ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರದ ಪಕ್ಕದಲ್ಲಿ ಖಾಲಿ ಸ್ಥಳ ಇಲ್ಲದೆ ಇರುವುದರಿಂದ ಈ ಪ್ರಸೂತಿ ಗೃಹ ವಿಸ್ತರಣದ ಕಟ್ಟಡವನ್ನು ಕಟ್ಟುವುದು ಸಾಧ್ಯವಿಲ್ಲ. ದಾನವಾಗಿ ಬಂದ 3 ಎಕರೆ ಜಮೀನಿನಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮತ್ತು ಅದರ ಪಕ್ಕದಲ್ಲಿಯೇ ಪ್ರಸೂತಿಗೃಹದ ವಿಸ್ತರಣೆ ಕಟ್ಟಡವನ್ನು ಕಟ್ಟುವ ಬಗ್ಗೆ ಸರ್ಕಾರವು ಆಲೋಚಿಸುತ್ತಿದೆ.

ಶ್ರೀ ಕೆ. ಚೆನ್ನಬಸವನಗೌಡ.—ಕೂಡ್ಲಿಗಿ ಪಟ್ಟಣದ ಜನರು 35 ಸಾವಿರ ರೂಪಾಯಿಗಳ ನಗದು ಹಣ ಮತ್ತು 3 ಎಕರೆ ಜಮೀನನ್ನು ದಾನಮಾಡಿ 3 ವರ್ಷವಾಯಿತು. ಸರ್ಕಾರದವರು ಕೇಳಿದ ಪ್ರಕಾರವೇ 35 ಸಾವಿರ ರೂಪಾಯಿಗಳನ್ನು ಅವರು ಕೊಟ್ಟಿದ್ದಾರೆ. ಆದರೆ ಸರ್ಕಾರದವರು 3 ವರ್ಷ ನಿಧಾನ ಮಾಡಿದ್ದರಿಂದ ಈಗ ಬೆಲೆಗಳೆಲ್ಲಾ ಜಾಸ್ತಿಯಾಗಿವೆ. ಸರ್ಕಾರದವರು ತಾವೇ ತಪ್ಪು ಮಾಡಿ ಈಗ ಮತ್ತೆ ಅವರನ್ನು ಹಣ ಕೊಡಿ ಎಂದು ಕೇಳುತ್ತಿದ್ದಾರೆ. ಇದು ಯಾವ ನ್ಯಾಯ ? ಹಿಂದಿನ ಸರ್ಕಾರದವರು ತಡಮಾಡಿದ್ದರಿಂದ ಈಗ ಇನ್ನೂ 15 ಸಾವಿರ ರೂಪಾಯಿಗಳನ್ನು ಆಲ್ಲಿಯ ಜನರು ಕೊಡಬೇಕಾಗಿ ಬಂದಿದೆ. ಈ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು. ಇಲ್ಲಿ ಮಳೆ ಇಲ್ಲದೆ ಬರಗಾಲ ಬಂದಿದೆ. ಅವರು ಮತ್ತೆ 15 ಸಾವಿರ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ 15 ಸಾವಿರ ರೂಪಾಯಿಗಳನ್ನು ಏನು ಕೇಳುತ್ತಿದ್ದಾರೆ, ಅದನ್ನು ಮನ್ನಾ ಮಾಡಿ ಆಲ್ಲಿ ಆಸ್ಪತ್ರೆ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಈ ವಿಷಯದಲ್ಲಿ ಹಿಂದಿನ ಸರ್ಕಾರದವರೂ ಕೂಡ ತಪ್ಪು ಮಾಡಿಲ್ಲವೆಂದು ಅನಿಸುತ್ತದೆ. 50 ಸಾವಿರ ರೂಪಾಯಿಗಳನ್ನು ಕಟ್ಟಬೇಕೆಂದು ಸರ್ಕಾರದ ನೀತಿಯೇ ಇರುವುದರಿಂದ ಇವರು ಕಟ್ಟಡ ಕಟ್ಟುವುದಕ್ಕೆ ಹೋಗಿಲ್ಲ. ಇನ್ನು ಎರಡನೆಯದಾಗಿ ಈ ವರ್ಷ ಆಲ್ಲಿ ಬರಗಾಲ ಇರುವುದರಿಂದ 15 ಸಾವಿರ ರೂಪಾಯಿಗಳನ್ನು ಮನ್ನಾ ಮಾಡಬೇಕೆಂದು ಕೇಳಿದ್ದೀರಿ. ನಿಮ್ಮ ತಾಲ್ಲೂಕಿನಂತೆಯೇ ಬೇರೆ ತಾಲ್ಲೂಕು ಗಳಲ್ಲೂ ಬರಗಾಲ ಪರಿಸ್ಥಿತಿ ಇದೆ. ನಿಮಗೆ ಮನ್ನಾ ಮಾಡಿದರೆ ರಾಜ್ಯದ ಬೇರೆ ತಾಲ್ಲೂಕುಗಳಿಗೂ ಮನ್ನಾ ಮಾಡಬೇಕಾಗುತ್ತದೆ. ತಾವು ಮನಸ್ಸು ಮಾಡಿದರೆ ಈ 15 ಸಾವಿರ ಹಣವನ್ನು ಕೆಲವೇ ದಿವಸಗಳಲ್ಲಿ ಕಟ್ಟಿಸಬಹುದು. ತಾವು ಈ ಹಣವನ್ನು ಕಟ್ಟಿಸಿದರೆ ಆದಷ್ಟು ಬೇಗ ಕಟ್ಟಡವನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಸಚಿವರು ನಿಮ್ಮನ್ನೇ ಕೇಳಿದ್ದಾರೆ. ತಾವು 15 ಸಾವಿರ ರೂಪಾಯಿಗಳನ್ನು ಕೊಡಿಸುತ್ತೇವೆಂದು ಹೇಳಿದರೆ ಅವರು ಕಟ್ಟಡವನ್ನು ಕಟ್ಟಿಸುತ್ತಾರಂತೆ.

ಶ್ರೀ ಕೆ. ಚನ್ನಬಸವನಗೌಡ.—ಸ್ವಾಮಿ, ಇದು ಬಹಳ ಕಷ್ಟ. ಆ ಭೂಮಿಯನ್ನು ದಾನ ಕೊಡುವ ಸಂದರ್ಭದಲ್ಲೇ ಒಂದು ಷರತ್ತನ್ನು ಹಾಕಿ 3 ವರ್ಷದೊಳಗೆ ಈ ಆಸ್ಪತ್ರೆಯ ಕಟ್ಟಡವನ್ನು ಕಟ್ಟಿಸಬೇಕೆಂದು ಹೇಳಿದ್ದಾರೆ. ಆಲ್ಲದೆ ನೀವು ಕಟ್ಟಡವನ್ನು ಕಟ್ಟಿಸದಿದ್ದರೆ ಈ ಭೂಮಿಯನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಕೂಡ ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ಈ ವರ್ಷವೇ ಆಲ್ಲಿ ಕಟ್ಟಡವನ್ನು ಕಟ್ಟಲು

ಪ್ರಾರಂಭ ಮಾಡಲಿ, ಆನಂತರ ಮುಂದಿನದನ್ನು ನೋಡೋಣ. ಸರ್ಕಾರದವರು ಕೂಡಲೇ ಕಟ್ಟಡವನ್ನು ಕಟ್ಟಲು ಕ್ರಮ ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಪರಿಶೀಲನೆ ಮಾಡುತ್ತೇನೆ.

ವಿಷಯ : ಕೊಡಗು ಜಿಲ್ಲೆಯಲ್ಲಿ ವೈದ್ಯರುಗಳ ನೇಮಕಾತಿ.

ಪ್ರ. 254 (89) ಶ್ರೀ ಎಂ. ಎಂ. ನಾಣಯ್ಯ (ಮಡಕೇರಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಕೊಡಗು ಜಿಲ್ಲೆಯಲ್ಲಿ ಪುರುಷ ಮತ್ತು ಮಹಿಳಾ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು (ಗ್ರಾಮಾಂತರ ಪ್ರದೇಶ) ;

(ಆ) ವೈದ್ಯರ ಹುದ್ದೆಗಳು ಖಾಲಿಯಿರುವ ಆಸ್ಪತ್ರೆಗಳು ಎಷ್ಟು ? ಏಕೆ ;

(ಇ) ಎಷ್ಟು ಕಾಲದಿಂದ ವೈದ್ಯರ ಹುದ್ದೆಗಳು ಖಾಲಿ ಇವೆ ;

(ಈ) ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಿಂದ ಕೈಗೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

(ಅ) ಪುರುಷ ವೈದ್ಯರು—22, ಮಹಿಳಾ ವೈದ್ಯರು—5.

(ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.

(ಇ) ಲಗತ್ತಿಸಿದ ಪಟ್ಟಿಯಲ್ಲಿ ನಮೂದಿಸಿದೆ.

(ಈ) ಪುರುಷ ವೈದ್ಯರನ್ನು ನೇಮಿಸಿಕೊಳ್ಳಲು ಲೋಕಸೇವಾ ಆಯೋಗದಿಂದ ಕ್ರಮ ಕೈಗೊಳ್ಳಲಾಗಿದೆ. ಮಹಿಳಾ ವೈದ್ಯರನ್ನು ನೇಮಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

LIST SHOWING THE VACANCIES OF MALE AND LADY MEDICAL OFFICERS IN KODAGU DISTRICT AS ON 18-8-83

Sl. No.	Designation	Place where vacant	Since when	Remarks
1	2	3	4	5
1.	A.D.H.O.	D.H. & FWO Madikeri	1982	Deputed to P.G. Course
2.	4 Leave Reserve Male Medical Officer	do	2 posts 1981 1 post from 26-5-1983 1 post from 17-6-1983	Due to Transfer
3.	Male M.O.	Dist. Lab	23-4-1982	do
4.	Male M.O.	PHC Napoklu under C.H. Programme	March 1983	Newly created post.
5.	do	PHU Bhagamandala	31-10-1981	Due to transfer
6.	do	PHU Cheyyandane	9-6-1983	do
7.	do	PHU Sampaje	27-1-1983	Deputed for P.G. Course
8.	do	PHU Karkke Ayur. Disp.	20-5-1983	Due to transfer